## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಸಿ.ಸಿ. ನಂ. 191/19

ಸಿ.ಡಬ್ಲ್ಯು 2
ಪಿ.ಡಬ್ಲ್ಯು 2

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗಪ್ಪ ಗೌಡ |
| ತಂದೆಯ ಹೆಸರು | - | ಜೋಗಿ ಗೌಡ |
| ವಯಸ್ಸು | - | 53 ವರ್ಷ |
| ಉದ್ಯೋಗ | - | ವ್ಯವಸಾಯ |
| ವಾಸ್ತವ್ಯ | - | ದುಂಡುಕುಳಿ, ಕುಮಟಾ ತಾಲೂಕ |

(ಇಂದು ದಿನಾಂಕ 12-10-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ -ಮಾನ್ಯ ಸ.ಸ.ಅ. ರವರಿಂದ**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಕೃತ್ಯ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ಬೊಮ್ಮಲಿಂಗೇಶ್ವರ ದೇವಸ್ಥಾನದಲ್ಲಿ ಕಳ್ಳತನ ಆದ ವಿಚಾರದಲ್ಲಿ ಪೊಲೀಸನವರು ದಿನಾಂಕ 14-09-2017 ರಂದು ದೇವಸ್ಥಾನದ ಬಳಿ ಬಂದಿದ್ದು, ಆ ಸಂದರ್ಭದಲ್ಲಿ ಸ್ಥಳದಲ್ಲಿ ನಾನು ಹಾಜರಿದ್ದು, ನನ್ನ ಸಮಕ್ಷಮದಲ್ಲಿ ಪೊಲೀಸನವರು ಮಧ್ಯಾಹ್ನ 3.00 ಗಂಟೆಯಿಂದ 4.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನನ್ನೊಂದಿಗೆ ಚಾ.ಸಾ. 3 ರವರು ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಪಂಚನಾಮೆಯನ್ನು ಬರೆಯಲು ಚಾ.ಸಾ. 1 ರವರು

ಮಾಹಿತಿಯನ್ನು ನೀಡಿರುತ್ತಾರೆ. ಪಂಚನಾಮೆಯ ಸಂದರ್ಭದಲ್ಲಿ ಪೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – ಆರೋಪಿ ಪರ ಶ್ರೀ ಎನ್.ಎಂ.ಎನ್. ವಕೀಲರಿಂದ**

ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ಈಗ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಹೀಗೆ ಬರೆಯುವಂತೆ ನಾನು ಹೇಳಿರುವುದಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ಪಂಚನಾಮೆಯ ಸಂದರ್ಭದಲ್ಲಿ 2 ಪೋಟೋಗಳನ್ನು ತೆಗೆದಿರಬಹುದು. ನಿ.ಪಿ.3 ನ್ನು ಹೊರತುಪಡಿಸಿ ಮತ್ತೊಂದು ಪೋಟೋವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿ ಇರುವಂತಹ ಮತ್ತೊಂದು ಪೋಟೋವನ್ನು ತೋರಿಸಲಾಗಿ ಅದರಲ್ಲಿ ತಾವು ಕಂಡುಬರುವುದಿಲ್ಲ ಎಂದು ನುಡಿದಿದ್ದು, ಆದಕಾರಣ ಅದನ್ನು ನಿಶಾನೆಯನ್ನಾಗಿ ಗುರುತಿಸಿರುವುದಿಲ್ಲ. ಪಂಚನಾಮೆಗೆ ಇಬ್ಬರು ಪೊಲೀಸನವರು ಬಂದಿದ್ದು, ಅವರ ಹುದ್ದೆ ನನಗೆ ತಿಳಿಯುವುದಿಲ್ಲ. ನಾನು ಸಹಿ ಮಾಡಿದ್ದೇನೆ ಎಂದು ಹೇಳುವಂತಹ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿಯೇ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 3 ರ ಆಧಾರದ ಮೇರೆಗೆ ಅದು ದೇವಸ್ಥಾನಕ್ಕೆ ಸಂಬಂಧಪಟ್ಟ ಪೋಟೊ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಅದು ದೇವಸ್ಥಾನದ ಪೋಟೋವೇ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಮತ್ತೊಮ್ಮೆ ಸದರಿ ಪ್ರಶ್ನೆಯನ್ನು ಪುನರಾವರ್ತಿಸಿ ದೇವಸ್ಥಾನವನ್ನು ಈ ಹಿಂದೆ ನೋಡದೇ ಇದ್ದವರು ನಿ.ಪಿ. 3 ಪೋಟೋವನ್ನು ನೋಡಿದಲ್ಲಿ ಅದು ದೇವಸ್ಥಾನಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿ.ಪೋಟೋವನ್ನು ತೆಗೆಯಲು ಪೋಟೋಗ್ರಾಫರ್ ಬಂದಿದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ಪೋಟೋವನ್ನು ಪೋಟೋಗ್ರಾಫರ್ ಅವರು ತಂದಿದ್ದಂತಹ ಕ್ಯಾಮರಾದಲ್ಲಿ ತೆಗೆಯಲಾಗಿರುತ್ತದೆ.

ಪಂಚನಾಮೆಯನ್ನು ಪೊಲೀಸನವರು ಬರೆದಿರುತ್ತಾರೆ. ಬರೆದಂತಹ ಪೊಲೀಸರವರ ಹುದ್ದೆ ಮತ್ತು ಹೆಸರು ನನಗೆ ತಿಳಿದಿಲ್ಲ. ಪಂಚನಾಮೆಗೆ ಯಾರು ಸಹಿ ಮಾಡಿದ್ದಾರೆ ಹಾಗೂ ಮೊದಲಿಗೆ ಯಾರು

ಸಹಿ ಮಾಡಿದರು ಎಂದು ನನಗೆ ಹೇಳಲು ಆಗುವುದಿಲ್ಲ. ಯಾವುದೇ ಪಂಚನಾಮೆಯನ್ನು ಸ್ಥಳದಲ್ಲಿ ಜರುಗಿಸಿರುವುದಿಲ್ಲ ಹಾಗೂ ಫಿರ್ಯಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ